# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ ೧೫೨<br>Volume 152 | ಬೆಂಗಳೂರು, ಗುರುವಾರ, ನವೆಂಬರ್ ೨೩, ೨೦೧೭ (ಮಾರ್ಗಶಿರ ೨, ಶಕ ವರ್ಷ ೧೯೩೯)<br>Bengaluru, Thursday, November 23, 2017 (Margashira 2, Shaka Varsha 1939) | ಸಂಚಿಕೆ ೪೬<br>Issue 46 |
|---|---|---|


## ಭಾಗ ೪ಎ

## ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಛ ನ್ಯಾಯಾಲಯವು ಮಾಡಿದ ನಿಯಮಗಳು

### ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವಾಲಯ

### ತಿದ್ದುಪಡಿ

**ಸಂಖ್ಯೆ : ಅಪಜೀ 39 ಅಆಸೇ 2014, ಬೆಂಗಳೂರು, ದಿನಾಂಕ : 25-07-2017**

ದಿನಾಂಕ : 01-07-2014 ರ ಅಧಿಸೂಚನೆ ಸಂಖ್ಯೆ : ಅಪಜೀ 39 ಆಆಸೇ 2014 ರಲ್ಲಿ ಕ್ರಮ ಸಂಖ್ಯೆ : 74ರಲ್ಲಿ ಶ್ರೀ ಹೆಚ್.ಕೆ.ರಾಜು ಇವರ ಹುದ್ದೆಯು "ವಾಚರ್"ಎಂದು ನಮೂದಾಗಿರುವುದನ್ನು "ವಾಹನ ಚಾಲಕ" ಎಂದು ತಿದ್ದುಪಡಿ ಮಾಡಿ ಓದಿಕೊಳ್ಳುವುದು.

PR - 2107

SC-10

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಸಿ.ರಾಜೇಂದ್ರ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು)

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

### ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ .

### ಅಧಿಸೂಚನೆ

**ಸಂಖ್ಯೆ : ಅಪಜೀ 208 ಎಫ್ಎಫ್ 2014, ಬೆಂಗಳೂರು, ದಿನಾಂಕ : 04.10.2017**

ಕರ್ನಾಟಕ ಅರಣ್ಯ ಕಾಯ್ದೆ 1963ರ (1964ನೇ ಇಸವಿಯ ಕರ್ನಾಟಕ ಕಾಯ್ದೆ-5) ಕಲಂ-4 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಈ ಕೆಳಕಂಡ "ಅನುಸೂಚಿ"ಯಲ್ಲಿ ನಮೂದಿಸಿರುವ ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಆನಗೋಡು ಗ್ರಾಮದ ಸರ್ಕಾರಿ ಜಮೀನುಗಳನ್ನು ಈ ಅಧಿಸೂಚನೆಯು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ "ಮೀಸಲು ಅರಣ್ಯ" ಎಂದು ರಚಿಸಲು ಉದ್ದೇಶಿಸಿ ಘೋಷಿಸಲಾಗಿದೆ.

ಅನುಸೂಚಿ

| | | |
|---|---|---|
| ಜಿಲ್ಲೆಯ ಹೆಸರು | : | ದಾವಣಗೆರೆ |
| ತಾಲ್ಲೂಕಿನ ಹೆಸರು | : | ದಾವಣಗೆರೆ |
| ಹೋಬಳಿ ಹೆಸರು | : | ಆನಗೋಡು |
| ಗ್ರಾಮದ ಹೆಸರು | : | ಆನಗೋಡು |
| ಸರ್ವೆ ನಂಬರ್ | : | 129, 130, 131, 132, 133 & 139ಬಿ1 |
| ಪ್ರಸ್ತಾಪಿತ ಮೀಸಲು ಅರಣ್ಯದ ಹೆಸರು | : | ಆನಗೋಡು ಕಾಯ್ದಿಟ್ಟ ಅರಣ್ಯ |



IV-A-F-1 (O)

| | | |
|---|---|---|
| ವಿಸ್ತೀರ್ಣ | : | 46.21, 26.21, 39.26, 24.26, 64.18 & 14.90 , 215.32 (ಎಕರೆ-ಗುಂಟೆ) |

2. ಮೇಲ್ಕಂಡ ಕಾಯ್ದೆಯ ಕಲಂ 4(1)(ಸಿ)ರ ಪ್ರಕಾರ ಕರ್ನಾಟಕ ಸರ್ಕಾರವು ಉಪ ವಿಭಾಗಾಧಿಕಾರಿ, ಹೊಸಪೇಟೆ (ಬಳ್ಳಾರಿ ಜಿಲ್ಲೆ) ಇವರನ್ನು ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನಾಗಿ ನೇಮಿಸಿದೆ. ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಮೇಲೆ ನಮೂದಿಸಿರುವ ಪ್ರದೇಶದಲ್ಲಿ / ಅದರ ಮೇಲೆ / ಅಂತಹ ಜಮೀನಿನ ಯಾವುದಾದರೂ ವ್ಯಕ್ತಿಗೆ ಇರಬಹುದಾಗಿರುವ ಹಕ್ಕು ಬಾಧ್ಯತೆಗಳನ್ನು ಇತ್ಯರ್ಥಗೊಳಿಸಿ, ನಿರ್ಧರಿಸಿ ವಿಚಾರಣೆ ಮಾಡಿ ತೀರ್ಮಾನಿಸುವುದು.

3. ಮೇಲ್ಕಂಡ ಕಾಯ್ದೆಯ ಕಲಂ 4(2) ರ ಪ್ರಕಾರ ಕರ್ನಾಟಕ ಸರ್ಕಾರವು ಅರಣ್ಯ ವಿಭಾಗಾಧಿಕಾರಿಗಳು, ದಾವಣಗೆರೆ ವಿಭಾಗ, ದಾವಣಗೆರೆ ಇವರನ್ನು ಈ ವಿಚಾರಣೆಯಲ್ಲಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳಿಗೆ ಸಹಕರಿಸಲು ಹಾಗೂ ಅರಣ್ಯ ಇಲಾಖೆಯ ಪರವಾಗಿ ಪ್ರತಿನಿಧಿಸಲು ನೇಮಿಸಿದೆ.

4. ಮೇಲ್ಕಂಡ ಕಾಯ್ದೆಯ ಕಲಂ 11, 12 ಮತ್ತು 14ನೇ ಪ್ರಕಾರ ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಈ ಆದೇಶ ಹೊರಡಿಸಿದ ದಿನಾಂಕದಿಂದ ಮೂರು (3) ತಿಂಗಳೊಳಗೆ ಬಾಧಿತ ವ್ಯಕ್ತಿಗಳು ಸಲ್ಲಿಸುವ ಮೇಲ್ಮನವಿಗಳನ್ನು ಪರಿಶೀಲಿಸಲು ಸದರಿ ಕಾಯ್ದೆಯ ಕಲಂ 16(1)ನೇ ಪ್ರಕಾರ ಕರ್ನಾಟಕ ಕಂದಾಯ ಮೇಲ್ಮನವಿ ನ್ಯಾಯ ಮಂಡಳಿಗೆ ಅಧಿಕಾರವಿರುತ್ತದೆ.

5. ಮೇಲ್ಕಂಡ ಕಾಯ್ದೆಯ ಕಲಂ 15ನೇ ಪ್ರಕಾರ ಬಾಧಿತವಾದ ಯಾವುದೇ ವ್ಯಕ್ತಿಯು ಸದರಿ ಕಾಯ್ದೆಯ ಕಲಂ 16(2) ನೇ ಪ್ರಕಾರ ಆದೇಶ ಹೊರಡಿಸಿದ ದಿನಾಂಕದಿಂದ ಮೂರು (3) ತಿಂಗಳೊಳಗೆ ಜಿಲ್ಲಾ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಬಹುದಾಗಿದೆ.

## ಸೀಮಾ ವಿವರಣೆ

ಉತ್ತರ :-

ಸೀಮಾರೇಖೆಯು ಅನಗೋಡು ಗ್ರಾಮದ ಸ.ನಂ. 130ರ ವಾಯುವ್ಯ ಮೂಲೆಯಲ್ಲಿ ಸ.ನಂ. 127 & 130 ಗಡಿಗಳು ಸೇರುವ ಹಾಗೂ ರಾಷ್ಟ್ರೀಯ ಹೆದ್ದಾರಿ ನಂ. 4ರ ಪಕ್ಕದಲ್ಲಿ 1ನೇ ಕಲ್ಲಿನಿಂದ 119 ಡಿಗ್ರಿ ಕೋನದೊಂದಿಗೆ ಆರಂಭವಾಗಿ ಮುಂದೆ ದಾವಣಗೆರೆಯಿಂದ ಚಿತ್ರದುರ್ಗದ ಕಡೆಗೆ ಹೋಗುವ ರಾಷ್ಟ್ರೀಯ ಹೆದ್ದಾರಿ ನಂ.4ರ ಬಲ ಬದಿಯಲ್ಲಿ ಪೂರ್ವಾಭಿಮುಖವಾಗಿ ಚಲಿಸುತ್ತಾ, ಕ್ಷೇತ್ರದ ಬದಿಯಲ್ಲಿ ಪೂರ್ವಾಭಿಮುಖವಾಗಿ ಚಲಿಸುತ್ತಾ, ಕ್ಷೇತ್ರದ ಸ.ನಂ. 132ರ ಈಶಾನ್ಯ ಮೂಲೆಯಲ್ಲಿ 10ನೇ ಕಲ್ಲನ್ನು ಸೇರುತ್ತದೆ. ಪೂರ್ವದಲ್ಲಿ ಸೀಮಾರೇಖೆಯು ಈ ಕೆಳಗಿನಂತೆ ಚಲಿಸಿರುತ್ತದೆ.

| ಕಲ್ಲಿನಿಂದ | ಕಲ್ಲಿಗೆ | ಕೋನ (ಡಿಗ್ರಿಗಳಲ್ಲಿ) | ಅಂತರ (ಸರಪಳಿಗಳಲ್ಲಿ) |
|---|---|---|---|
| 1 | 2 | 119° | 7-00 |
| 2 | 3 | 121° | 7-00 |
| 3 | 4 | 120° | 7-00 |
| 4 | 5 | 120° | 7-00 |
| 5 | 6 | 120° | 7-00 |
| 6 | 7 | 120° | 7-00 |
| 7 | 8 | 122° | 7-00 |
| 8 | 9 | 113° | 7-00 |
| 9 | 10 | 108° | 7-25 |

ಪೂರ್ವ :-

ಸೀಮಾರೇಖೆಯು ಕ್ಷೇತ್ರದ ಸ.ನಂ. 132ರ ಈಶಾನ್ಯ ಮೂಲೆಯ ಹಾಗೂ ಹಾಲವರ್ತಿ ಗಡಿ ಸೇರುವ ಸ್ಥಳದಲ್ಲಿ 10ನೇ ಕಲ್ಲಿನಿಂದ 165° ಕೋನದೊಂದಿಗೆ ಆರಂಭವಾಗಿ ಮುಂದೆ ಹಾಲವರ್ತಿ ಗ್ರಾಮದ ಪಶ್ಚಿಮದ ಗಡಿ ಗುಂಟ ದಕ್ಷಿಣಾಭಿಮುಖವಾಗಿ ಚಲಿಸುತ್ತಾ, ಮುಂದೆ ಕ್ಷೇತ್ರದ ಸ.ನಂ.133ರ ಆಗ್ನೇಯ ಮೂಲೆಯನ್ನು 13ನೇ ಕಲ್ಲನ್ನು ಸೇರುತ್ತದೆ. ಪೂರ್ವದಲ್ಲಿ ಸೀಮಾರೇಖೆಯು ಈ ಕೆಳಗಿನಂತೆ ಚಲಿಸಿರುತ್ತದೆ.

| ಕಲ್ಲಿನಿಂದ | ಕಲ್ಲಿಗೆ | ಕೋನ (ಡಿಗ್ರಿಗಳಲ್ಲಿ) | ಅಂತರ (ಸರಪಳಿಗಳಲ್ಲಿ) |
|---|---|---|---|
| 10 | 11 | 165° | 16.50 |
| 11 | 12 | 176° | 6.00 |
| 12 | 13 | 217° | 11.00 |

ದಕ್ಷಿಣ :-

ಸೀಮಾರೇಖೆಯು ಅನಗೋಡು ಗ್ರಾಮದ ಸ.ನಂ.133ರ ಆಗ್ನೇಯ ಮೂಲೆಯಲ್ಲಿ ಸ.ನಂ. 133, 134 ಹಾಲವರ್ತಿ ಮೇಲೆ 13ನೇ ಕಲ್ಲಿನಿಂದ 260 ಡಿಗ್ರಿ ಕೋನದೊಂದಿಗೆ ಆರಂಭವಾಗಿ ಮುಂದೆ ಸ.ನಂ.134ನ್ನು ಹೊರತುಪಡಿಸಿ ಇದರ ಉತ್ತರದಗಡಿ ಗುಂಟ ಪಶ್ಚಿಮಾಭಿಮುಖವಾಗಿ ಚಲಿಸಿ 18ನೇ ಕಲ್ಲನ್ನು ಸೇರಿ ನಂತರ ಸ.ನಂ.138ನ್ನು ಹೊರತುಪಡಿಸಿ ಇದರ ಪೂರ್ವದ ಗಡಿಗುಂಟಾ ಉತ್ತರಾಭಿಮುಖವಾಗಿ ಚಲಿಸಿ 22ನೇ ಕಲ್ಲನ್ನು ಸೇರಿ ತದನಂತರ ಸದರಿ ಸ.ನಂ.138 ಉತ್ತರದ ಗಡಿಗುಂಟಾ ಪಶ್ಚಿಮಾಭಿಮುಖವಾಗಿ ಚಲಿಸಿ 24ನೇ ಕಲ್ಲನ್ನು ಸೇರಿ ನಂತರ ಸ.ನಂ. 138ರ ಪಶ್ಚಿಮದ ಗಡಿಗುಂಟಾ

ದಕ್ಷಿಣಾಭಿಮುಖವಾಗಿ 2.00 ಸರಪಳಿ ದೂರ ಚಲಿಸಿ 25ನೇ ಕಲ್ಲನ್ನು ಸೇರಿಕೊಂಡು ಮುಂದೆ ಸ.ನಂ.139ರ ಮುಖಾಂತರ ಪಶ್ಚಿಮಾಭಿಮುಖವಾಗಿ ಚಲಿಸಿ ಮುಂದೆ ಆನಗೋಡು ಗ್ರಾಮದ ಸ.ನಂ. 139/ಬಿ1 140 & 128ರ ಗಡಿಗಳು ಸೇರುವ ಸ್ಥಳದಲ್ಲಿ 30ನೇ ಕಲ್ಲನ್ನು ಸೇರುತ್ತದೆ. ದಕ್ಷಿಣದಲ್ಲಿ ಸೀಮಾರೇಖೆಯು ಈ ಕೆಳಗಿನಂತೆ ಚಲಿಸುತ್ತದೆ.

| ಕಲ್ಲಿನಿಂದ | ಕಲ್ಲಿಗೆ | ಕೋನ (ಡಿಗ್ರಿಗಳಲ್ಲಿ) | ಅಂತರ (ಸರಪಳಿಗಳಲ್ಲಿ) |
|---|---|---|---|
| 13 | 14 | 260° | 6–00 |
| 14 | 15 | 260° | 6–25 |
| 15 | 16 | 260° | 6–25 |
| 16 | 17 | 260° | 6–00 |
| 17 | 18 | 260° | 6–25 |
| 18 | 19 | 19° | 6–00 |
| 19 | 20 | 19° | 6–00 |
| 20 | 21 | 19° | 6–00 |
| 21 | 22 | 19° | 5–75 |
| 22 | 23 | 271° | 8–00 |
| 23 | 24 | 271° | 7–75 |
| 24 | 25 | 284° | 7–00 |
| 25 | 26 | 284° | 7–00 |
| 26 | 27 | 284° | 7–00 |
| 27 | 28 | 284° | 7–00 |
| 28 | 29 | 333° | 6–00 |
| 29 | 30 | 333° | 2–50 |

ಪಶ್ಚಿಮ :–

ಸೀಮಾರೇಖೆಯು ಆನಗೋಡು ಕ್ಷೇತ್ರದ ಸ.ನಂ.139/ಬಿ1ರ ನೈರುತ್ಯ ಮೂಲೆಯಲ್ಲಿ 30ನೇ ಕಲ್ಲಿನಿಂದ 20° ಕೋನದೊಂದಿಗೆ ಆರಂಭವಾಗಿ ಮುಂದೆ ಆನಗೋಡು ಸ.ನಂ. 128 & 127ಗಳನ್ನು ಹೊರತುಪಡಿಸಿ ಇವುಗಳ ಪೂರ್ವದ ಗಡಿಗುಂಟ ಉತ್ತರಾಭಿಮುಖವಾಗಿ ಚಲಿಸುತ್ತಾ, ಮುಂದೆ 34ನೇ ಕಲ್ಲನ್ನು ದಾಟಿ ಕ್ಷೇತ್ರದ ಸ.ನಂ. 130ರ ವಾಯುವ್ಯ ಮೂಲೆಯಲ್ಲಿ ಪ್ರಾರಂಭ ಸ್ಥಾನವನ್ನು ಸೇರುತ್ತದೆ. ಪಶ್ಚಿಮದಲ್ಲಿ ಸೀಮಾರೇಖೆಯು ಕೆಳಗಿನಂತೆ ಚಲಿಸುತ್ತದೆ.

| ಕಲ್ಲಿನಿಂದ | ಕಲ್ಲಿಗೆ | ಕೋನ (ಡಿಗ್ರಿಗಳಲ್ಲಿ) | ಅಂತರ (ಸರಪಳಿಗಳಲ್ಲಿ) |
|---|---|---|---|
| 30 | 31 | 20° | 7–00 |
| 31 | 32 | 20° | 7–00 |
| 32 | 33 | 20° | 4–50 |
| 33 | 34 | 12° | 2–50 |
| 34 | 1 | 18° | 4–50 |

ಹಕ್ಕು ಮತ್ತು ಬಾಧ್ಯತೆಗಳು:–

1. ಆನಗೋಡು ಗ್ರಾಮದ ಸ.ನಂ.130, 131 ಮತ್ತು 132 ರಲ್ಲಿ ರಾಷ್ಟ್ರೀಯ ಹೆದ್ದಾರಿ ನಂ.4 ಹಾದುಹೋಗಿರುತ್ತದೆ.
2. ಸ.ನಂ.130 ರಲ್ಲಿ ಅರಣ್ಯ ವಸತಿಗೃಹಗಳ ಹಾಗೂ ಇಂದಿರಾ ಪ್ರಿಯದರ್ಶಿನಿ ಪ್ರಾಣಿ ಸಂಗ್ರಹಾಲಯ ಇರುತ್ತದೆ.
3. ಆನಗೋಡು ಅರಣ್ಯ ಕ್ಷೇತ್ರ ಪ್ರದೇಶವು ಗಡಿ ಸುತ್ತಾ ದನಗಳ ಕಂದಕ ಆವೃತವಾಗಿರುತ್ತದೆ.
4. ಸದರಿ ಪ್ರದೇಶವು ನೆಡುತೋಪಿನಿಂದ ಕೂಡಿರುತ್ತದೆ. ಇವುಗಳಲ್ಲಿ ಕಮರ, ಹುಣಸೇ, ನೀಲಗಿರಿ, ಹೊಂಗೆ, ಬೇವು, ತರೇದು, ಉದೇದು, ಕಕ್ಕೆ ಇತರೆ ಜಾತಿಯ ಗಿಡಗಳಿಂದ ಕೂಡಿರುತ್ತದೆ.

PR - 2108

SC-100

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ನಾರಾಯಣ

ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರಭಾರ)

ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.